ಎನ್ನತಕ್ಕಾಂಥ ಮಾತನ್ನು ಹೇಳಿ, ಕುರುಡನ ಮೇಲೆ ಕುಂಟ ಕುಳಿತುಕೊಂಡು ದಾರಿ ತೋರಿಸುತ್ತಾ ನಡೆಯುತ್ತಿರುವ ಸರ್ಕಾರ ಇದಾಗಿದೆ. ಆದರೆ ಕುರುಡ ಹೇಳುತ್ತಾನೆ, ನಿನ್ನನ್ನು ಕೆಡವಿ ಬಿಡುತ್ತೇನೆಂದು, ಕುಂಟ ಹೇಳುತ್ತಾನೆ, ಇವನಿಗೆ ಸರಿಯಾದ ರೀತಿಯಲ್ಲಿ ದಾರಿ ತೋರಿಸಿದರೆ, ಇವನ್ನೆಲ್ಲಿ ಸರಿಯಾದ ದಾರಿ ತಲುಪಿ ನನ್ನನ್ನು ಎಲ್ಲಿ ಕೆಡವಿ ಬಿಡುತ್ತಾನೋ ಎಂದು ಅವನ್ನು ತಪ್ಪು ದಾರಿ ತೋರಿಸತಕ್ಕ ಸ್ಥಿತಿ ಇವತ್ತು ರಾಜ್ಯದ ಜನತೆಗೆ ಪರಿಸ್ಥಿತಿಯಾಗಿದೆ. ಇದರಿಂದ ಇದು ಹೊರತಾಗಿಲ್ಲವೆಂಬ ಮಾತನ್ನು ಹೇಳಿ ನನಗೆ ಇಲ್ಲಿ ತಡವಾಗಿಯಾದರೂ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ಮತ್ತೊಮ್ಮೆ ಕೃತಜ್ಞತೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ. ಜೈ ಹಿಂದ್.

**ಛೇರ್ಮನ್:** ಇಲ್ಲಿಗೆ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಚರ್ಚೆ ಮುಕ್ತಾಯವಾಯಿತು. ನಾಳೆ ಸರ್ಕಾರದಿಂದ ಉತ್ತರ. ಈಗ ಪ್ರಶ್ನೋತ್ತರ.

## 15. ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

### ರಾಜ್ಯದಲ್ಲಿ ಹಳದಿ ಪಡಿತರ ಕಾರ್ಡು ವಿತರಣೆ

1386(121) ಶ್ರೀ ಈಶ್ವರಪ್ಪ ಕೆ.ಎಸ್.(ಶಿವಮೊಗ್ಗ): ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಹಳದಿ ಕಾರ್ಡು ಹಂಚಿಕೆಯಲ್ಲಿ ನಡೆದ ಅವ್ಯವಹಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಏನು ಕ್ರಮ ಕೈಗೊಳ್ಳಲಾಗಿದೆ;

ಇ) ಇನ್ನೂ ಎಷ್ಟು ದಿನಗಳಲ್ಲಿ ಪಡಿತರ ಕಾರ್ಡು ಹಂಚಲಾಗವುದು?

ಶ್ರೀ ಹೆಚ್.ಎಸ್.ಮಹಾದೇವ ಪ್ರಸಾದ್ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ಹೌದು ಅನರ್ಹ ಕುಟುಂಬಗಳು ಬಿ.ಪಿ.ಎಲ್. ಕಾರ್ಡು ಹೊಂದಿದ್ದು ಅರ್ಹ ಕುಟುಂಬಗಳು ಪಡಿತರ ಚೀಟಿ ಹೊಂದದೇ ಇರುವ ಬಗ್ಗೆ ದೂರುಗಳು ಬಂದಿದ್ದರಿಂದ ಅಂತಹ ಅನರ್ಹ ಕುಟುಂಬಗಳನ್ನು ಗುರುತಿಸಲು ಜುಲೈ 2004ರಿಂದ ಡಿಸೆಂಬರ್ 2004ರವರೆಗೆ ವಿಶೇಷ ಅಂದೋಲನ ಹಮ್ಮಿಕೊಳ್ಳಲಾಗಿತ್ತು.

ಆ) ಬಿ.ಪಿ.ಎಲ್. ಕಾರ್ಡನ್ನು ಹೊಂದಲು ಇರುವ ಆರ್ಥಿಕ ಮಿತಿಯು ರೂ.12,000 ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ರೂ.17,000 ಪಟ್ಟಣ ಪ್ರದೇಶಗಳಲ್ಲಿ ಎಂದು ನಿಗದಿಪಡಿಸಿದೆ, ಆದರೆ ಕುಟುಂಬಗಳ ವಾರ್ಷಿಕ ವರಮಾನ ಅಳತೆಗೋಲು ಮಾಡಲು ಯಾವುದೇ ನಿರ್ದಿಷ್ಟವಾದ ಪದ್ಧತಿ ಇಲ್ಲದೆ ಇರುವುದರಿಂದ ಕುಟುಂಬಗಳು ತಮ್ಮ ದಿನನಿತ್ಯದ ಆದಾಯ ಮತ್ತು ಖರ್ಚುಗಳನ್ನೊಳಗೊಂಡ ಮಾನದಂಡಗಳನ್ನು ನಿಗದಿಪಡಿಸಿ ಆ ಮಾನದಂಡ ಹೊಂದಿರುವವರು ಬಿ.ಪಿ.ಎಲ್.ಕುಟುಂಬಗಳೆಂದು ಪರಿಗಣಿಸಲು ಅನರ್ಹರೆಂದು ಗುರುತಿಸಿ ಇಂತಹವರ ಪಡಿತರ ಚೀಟಿಗಳನ್ನು ರದ್ದುಪಡಿಸಲು ಕ್ರಮ ಜರುಗಿಸಲಾಗಿದ್ದು, ಡಿಸೆಂಬರ್ 2004ರವರೆಗೆ ರಾಜ್ಯಾದ್ಯಂತ ಒಟ್ಟು 854583 ಬಿ.ಪಿ.ಎಲ್ ಪಡಿತರ ಚೀಟಿಯನ್ನು ಈಗಾಗಲೇ ರದ್ದು ಪಡಿಸಲಾಗಿರುತ್ತದೆ.

ಇ) ಸರ್ಕಾರಿ ಆದೇಶ ಸಂ. ಆನಾಸ 114 ಡಿಆರ್‌ಎ 04 ದಿನಾಂಕ 10.1.2005ರಲ್ಲಿನ ಆದೇಶದನ್ವಯ ಮನೆ ಮನೆ ಪುನರ್ ಸಮೀಕ್ಷಾ ಕಾರ್ಯವು ಜನವರಿ 2005ರಿಂದ ಪ್ರಾರಂಭವಾಗಿದ್ದು ಸದರಿ ಮನೆ ಮನೆ ಪುನರ್ ಸಮೀಕ್ಷಾ ಕಾರ್ಯವು ಏಪ್ರಿಲ್ 2005ರ ಮಾಹೆಯಲ್ಲಿ ಮುಕ್ತಾಯಗೊಳ್ಳಲಿದೆ. ತದನಂತರ ಅರ್ಹ ಕುಟುಂಬಗಳ ಪಟ್ಟಿಯನ್ನು ಗ್ರಾಮ/ವಾರ್ಡ್‌ಸಭೆಗಳ ಮುಂದಿಟ್ಟು ಅನುಮೋದಿಸಿದ ನಂತರ ಎಲ್ಲ ಅರ್ಹ ಫಲಾನುಭವಿಗಳಿಗೆ ಪಡಿತರ ಚೀಟಿ ವಿತರಿಸಲಾಗುವುದು.

**ಶ್ರೀ ಕೆ.ಎಸ್.ಈಶ್ವರಪ್ಪ:** ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಹಳದಿ ಕಾರ್ಡಿನ ಹಂಚಿಕೆಯಲ್ಲಿ ನಡೆದಿರುವ ಅವ್ಯವಹಾರ ಸರ್ಕಾರದ ಗಮನಕ್ಕೆ ಬಂದಿದೆಯೆ ಎಂದು ಕೇಳಿದ್ದಕ್ಕೆ 'ಹೌದು' ಎಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಇಡೀ ಕರ್ನಾಟಕ ರಾಜ್ಯದಲ್ಲಿ ಸಾಮಾನ್ಯ ಬಡವರಿಗೆ ಹಳದಿ ಕಾರ್ಡು ಕೊಡುವುದರಲ್ಲಿ ಈ ಸರ್ಕಾರ ದ್ರೋಹ ಮಾಡಿದೆ ಎಂಬ ಅಂಶ ಇಡೀ ರಾಜ್ಯದ ಬಡವರೆಲ್ಲರೂ ಯೋಚನೆ ಮಾಡುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಯಾರಿಗೆ ನ್ಯಾಯವಾಗಿ ಹಳದಿ ಕಾರ್ಡು ಸಿಗಬೇಕೋ ಅಂಥ ಕಡುಬಡವರಿಗೆ ಹಳದಿ ಕಾರ್ಡು ಸಿಗದಿರುವ ಈ ಸಂದರ್ಭದಲ್ಲಿ ರಾಜ್ಯ ಸರ್ಕಾರದಿಂದ ಆ ಕಡುಬಡವರಿಗೆ ಯಾವಾಗ ಹಳದಿ ಕಾರ್ಡನ್ನು ಕೊಡುತ್ತೀರಿ ಎಂಬುದನ್ನು ಸ್ಪಷ್ಟ ಮಾಡಬೇಕೆಂದು ಕೇಳಬಯಸುತ್ತೇನೆ.

**ಶ್ರೀ ಹೆಚ್.ಎಸ್.ಮಹದೇವ್‌ಪ್ರಸಾದ್:** ಮಾನ್ಯ ಅಧ್ಯಕ್ಷರೆ, ಈಗಾಗಲೆ ಇದರ ಬಗ್ಗೆ ಪುನರ್ ಸಮೀಕ್ಷೆ ಕಾರ್ಯವನ್ನು ಮಾಡಬೇಕೆಂದು ಸುತ್ತೋಲೆಯನ್ನು ಕಳಿಸಿ ಆ ಕಾರ್ಯವನ್ನು ಈಗಾಗಲೇ ಚಾಲನೆ ಮಾಡಲಾಗಿದೆ. ಮಾರ್ಚ್ ಅಂತ್ಯದೊಳಗೆ ಈ ಪುನರ್ ಸಮೀಕ್ಷೆ ಕಾರ್ಯದಿಂದ ಯಾರು ಅರ್ಹ ಬಡ ಕುಟುಂಬಗಳು ಹಳದಿ ಕಾರ್ಡಿನಿಂದ ವಂಚಿತರಾಗಿದ್ದಾರೋ ಅವರೆಲ್ಲರಿಗೂ ಕಾರ್ಡನ್ನು ತಲುಪಿಸತಕ್ಕಂಥ ಮತ್ತು ಪಡಿತರ ವ್ಯವಸ್ಥೆಯಲ್ಲಿ ಅವರನ್ನು ಒಳಪಡಿಸತಕ್ಕಂಥ ಕಾರ್ಯವನ್ನು ಸರ್ಕಾರ ಪ್ರಾಮಾಣಿಕವಾಗಿ ಮತ್ತು ಪಾರದರ್ಶಕವಾಗಿ ಮಾಡಬೇಕೆಂದು ಹೇಳಿ, ಆ ಸುತ್ತೋಲೆಯ ನಕಲನ್ನು ಮಾನ್ಯ ಸದಸ್ಯರುಗಳೆಲ್ಲರ ಗಮನಕ್ಕೆ ತರುವ ಪ್ರಯತ್ನ ಮಾಡಿದ್ದೇವೆ. ಹಿಂದಿನ ಸಂದರ್ಭಗಳಲ್ಲಿ ಅಧಿಕಾರಿಗಳು ಮಾಡಿರತಕ್ಕ ಸಮೀಕ್ಷೆಯಲ್ಲೇನು ಲೋಪಗಳಾಗಿದೆ ಎಂಬ ಬಗ್ಗೆ ಮಾನ್ಯ ಸದಸ್ಯರುಗಳೇನು ಸರ್ಕಾರದ ಗಮನಕ್ಕೆ ತಂದಿದ್ದಾರೆ ಅದನ್ನು ಸರಿಪಡಿಸುವ ದೃಷ್ಟಿಯಿಂದ ಗ್ರಾಮಪಂಚಾಯಿತಿ ಮಟ್ಟದಲ್ಲಿ ಒಬ್ಬ ಸ್ಥಳೀಯ ತಾಲ್ಲೂಕು ಮಟ್ಟದ ಅಧಿಕಾರಿಯನ್ನು ಜವಾಬ್ದಾರಿಯುತನನ್ನಾಗಿ ಮಾಡಿ ಆ ಸ್ಥಳೀಯ ಅಧಿಕಾರಿಗಳ ತಂಡದ ಜೊತೆಗೆ ಆ ಗ್ರಾಮದ ಚುನಾಯಿತ ಪ್ರತಿನಿಧಿಗಳು ಮತ್ತು ಸಂಘಸಂಸ್ಥೆಯ ಪ್ರತಿನಿಧಿಗಳನ್ನು ಕೂಡ ಆ ಸಮೀಕ್ಷೆಯ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು, ಆ ಸಮೀಕ್ಷೆಯ ಕಾರ್ಯವನ್ನು ಮನೆ ಮನೆಗೆ ಮಾಡಿದ ನಂತರ ಗ್ರಾಮ ಸಭೆಯಲ್ಲಿ ಅದರ ಅನುಮೋದನೆಯಾಗಿ, ಅಂತಿಮವಾಗಿ ಈ ಒಂದು ಸಮೀಕ್ಷೆ ಕಾರ್ಯ ಪೂರ್ಣಗೊಳಿಸಿ ಎಲ್ಲರನ್ನೂ ಈ ವ್ಯಾಪ್ತಿಯೊಳಗೆ ಅಳವಡಿಸಬೇಕು ಎಂದು ಮಾಡಿದ್ದೇವೆ, ಪ್ರತಿಯೊಂದು ಕುಟುಂಬಕ್ಕೂ ಒಂದಲ್ಲಾ ಒಂದು ರೀತಿಯ ಕಾರ್ಡು, ಅದು ಏ.ಪಿ.ಎಲ್. ಅಥವಾ ಬಿ.ಪಿ.ಎಲ್. ಕಾರ್ಡ್ ಆಗಬಹುದು, ಅಥವಾ ಅಂತ್ಯೋದಯ ಕಾರ್ಡು ಆಗಬಹುದು, ಅದನ್ನು ಅವರು ಹೊಂದಿರಬೇಕು ಎಂಬ ಉದ್ದೇಶ ಸರ್ಕಾರದ್ದಾಗಿದೆ. ಆ ನಿಟ್ಟಿನಲ್ಲಿ ಈ ಸಮೀಕ್ಷೆಯ ಕಾರ್ಯವನ್ನು ಹಮ್ಮಿಕೊಂಡಿದ್ದೇವೆ, ಈಗ ಗ್ರಾಮಪಂಚಾಯಿತಿ ಚುನಾವಣೆ ಬಂದಿರುವುದರಿಂದ ಒಂದು ತಿಂಗಳು ಕಾಲಾವಕಾಶ ವಿಸ್ತರಣೆ ಮಾಡಬೇಕಾಗಿದೆ, ಏಪ್ರಿಲ್ ಅಂತ್ಯದೊಳಗೆ ಈ ಕೆಲಸವನ್ನು ಪೂರ್ಣಗೊಳಿಸಿ ಯಾರು ವಂಚಿತರಾಗಿದ್ದಾರೆ ಅವರಿಗೆಲ್ಲಾ ಕಾರ್ಡುಗಳನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:** ಇವತ್ತು ಆ ಕಡುಬಡವರಿಗೆ ಕಾರ್ಡು ಕೊಡತಕ್ಕ ಸಂದರ್ಭದಲ್ಲಿ ಅನೇಕ ಕಂಡೀಷನ್‌ಗಳನ್ನು ರಾಜ್ಯ ಸರ್ಕಾರ ಹಾಕಿದೆ. ಅವರಿಗೆ ಫ್ಯಾನ್, ಫೋನ್, ಟಿವಿ ಇರಬಾರದು, ಒಂದು ಲಕ್ಷಕ್ಕಿಂತ ಹೆಚ್ಚಿಗೆ ಸಾಲ ತೆಗೆದುಕೊಂಡಿರಬಾರದು ಎಂದು ಈ ರೀತಿ ಏನು ಸಾಮಾನ್ಯ ಮನುಷ್ಯರು ಅಲ್ಲದೇ ಇರಬೇಕು ಅಂಥವರಿಗೆ ಮಾತ್ರ ನಾವು ಕಾರ್ಡು ಕೊಡುತ್ತೇವೆ ಎನ್ನುವಂಥ ಕಂಡೀಷನ್‌ಗಳನ್ನು ಹಾಕಿಕೊಂಡು ಕುಳಿತಿದ್ದೀರಿ, ಬಡತನ ಅಲ್ಲ, ಅವರು ಮನುಷ್ಯರೇ ಆಗಿರಬಾರದು, ಅಂಥವರಿಗೆ ಮಾತ್ರ ಕಾರ್ಡು ಸಿಗಲಾರದಂಥ ಸ್ಥಿತಿ ಬಂದಿದೆ. ಆದ್ದರಿಂದ ಇವು ಏನೇನು ಕಂಡೀಷನ್‌ಗಳಿವೆ ಸರಿಯಲ್ಲ. ಏಕೆಂದರೆ ಎಂಥ ಬಡವನಾದರೂ ಕೂಡ ಅವನ ಮನೆಯಲ್ಲಿ ಒಂದು ಫ್ಯಾನನನ್ನು ಇಟ್ಟುಕೊಂಡಿರುತ್ತಾನೆ. ಅವನಿಗೆ ಏನೋ ಆಸೆ, ಒಂದು ಟಿ.ವಿ ಯನ್ನು ಇಟ್ಟುಕೊಂಡಿರುತ್ತಾನೆ. ಇಂಥ ಸಂದರ್ಭದಲ್ಲಿ ಏನೇನು ಕಂಡೀಷನ್‌ಗಳನ್ನು ತಾವು ಹಾಕಿದ್ದೀರಿ, ಅದು ಯಾವ್ಯಾವ ಕಂಡೀಷನ್‌ಗಳನ್ನು ವಾಪಸ್ ಪಡೆದಿದ್ದೀರಿ ಎಂಬುದರ ಬಗ್ಗೆ ಸ್ಪಷ್ಟ ಮಾಡಬೇಕೆಂದು ನನ್ನ ಮನವಿ.

**ಶ್ರೀ ಹೆಚ್.ಎಸ್.ಮಹದೇವಪ್ರಸಾದ್:–** ಮಾನ್ಯ ಅಧ್ಯಕ್ಷರೆ, ಈ ಹಿಂದೆ ಟಿ.ವಿ. ಮತ್ತು ಗ್ಯಾಸ್ ಹೊಂದಿರತಕ್ಕಂಥವರನ್ನೂ ಈ ಒಂದು ಮಾನದಂಡದಲ್ಲಿ ಸೇರಿಸಿದ್ದೆವು. ಈಗ ಅದನ್ನು ತೆಗೆದು ಹಾಕಿದ್ದೇವೆ. ನೀವು ಹೇಳುವ ರೀತಿಯಲ್ಲಿ ಅನಿವಾರ್ಯವಾಗಿ ಕೆಲವು ಗ್ರಾಮಗಳಲ್ಲಿ 5–6 ಕುಟುಂಬಗಳವರು ಸೇರಿ ಒಂದು ಟಿ.ವಿ. ಇಟ್ಟುಕೊಂಡಿರುವಂತಹ ಸಂದರ್ಭಗಳು ಇರುತ್ತವೆ. ಗ್ಯಾಸ್ ಅನ್ನು ಇವತ್ತು pollution control ಮಾಡಬೇಕು, ಪರಿಸರ ಉಳಿಸಬೇಕು ಅನ್ನುವ ಕಾರಣಕ್ಕಾಗಿ ಅರಣ್ಯ ಅಂಚಿನ ಪ್ರದೇಶದಲ್ಲಿ ನಾವೇ ಗ್ಯಾಸ್ ಹೊಂದುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದೇವೆ. ಹೀಗಾಗಿ ಅವೆರಡನ್ನು ಮಾನದಂಡದಿಂದ ಹೊರತುಪಡಿಸಿದ್ದೇವೆ. ಅದಲ್ಲದೆ ಇನ್ನೂ luxury life lead ಮಾಡತಕ್ಕಂಥ, ಅಂದರೆ motor cycle ಮತ್ತು TVS ಇಟ್ಟುಕೊಂಡು ಪೆಟ್ರೋಲ್ consumptionಗೆ 500–1000 ರೂಪಾಯಿಗಳನ್ನು ಖರ್ಚು ಮಾಡತಕ್ಕಂಥ ಶಕ್ತಿಯಿರುವವನಿಗೆ ಪರವಾಗಿಲ್ಲ. APL card ಹೊಂದಿರುವವನಿಗೂ, BPL card ಹೊಂದಿರುವವನಿಗೂ ವ್ಯತ್ಯಾಸ ಬರುವಂತಾದ್ದು 150 ರೂಪಾಯಿಗಳು ಅದರಲ್ಲಿ ಒಟ್ಟು 20 ಕೆ.ಜಿ. ಅಕ್ಕಿ ಮತ್ತು 5 ಕೆ.ಜಿ. ಗೋಧಿ ಪಡೆಯುವುದರಿಂದ, 150 ರೂ.ಉಳಿತಾಯವಾಗುತ್ತದೆ. ಆ 150 ರೂಪಾಯಿಯನ್ನೂ ಅವರು ಉಳಿತಾಯ ಮಾಡುವಂತಹ ಸ್ಥಿತಿ ಯಾವ ಬಡ ಕುಟುಂಬಕ್ಕೆ ಇದೆಯೋ, ಅಂತಹವರಿಗೆ ಮಾತ್ರ ಇದನ್ನು ವ್ಯಾಪ್ತಿಗೆ ಒಳಪಡಿಸಿದ್ದೇವೆ. ಚಿಕ್ಕಮಗಳೂರು ಶಾಸಕರಾದ ರವಿಯವರು, plantation ನಲ್ಲಿ ಕೆಲಸ ಮಾಡತಕ್ಕಂಥ ಕಾರ್ಮಿಕರನ್ನೂ ಕಾರ್ಡ್ ನೀಡುವವರ ವ್ಯಾಪ್ತಿಗೆ ಒಳಪಡಿಸಬೇಕೆಂದು ಆಗಲೇ ಹೇಳಿದರು. ಅದರ ವಾಸ್ತವಿಕತೆಯನ್ನು ಅರ್ಥ ಮಾಡಿಕೊಂಡು ನಾವು, ಯಾರು ಕಂಪೆನಿಯಲ್ಲಿ ಕೆಲಸ ಮಾಡುವಂತಹ ಕಾರ್ಮಿಕರಿದ್ದಾರೋ, ಅವರನ್ನು ಹೊರತು ಪಡಿಸಿ, ಕಾಫಿ ತೋಟದಲ್ಲಿ ಕೆಲಸ ಮಾಡುವಂತಹ ಯಾವುದೇ ಕಾರ್ಮಿಕ, ಅವನಿಗೆ ಪ್ರತಿ ವರ್ಷವೆಲ್ಲಾ ಉದ್ಯೋಗ ಇರುವುದಿಲ್ಲ, ಅಂತಹವರಿಗೂ ಕೂಡ ಈ ಒಂದು ವ್ಯಾಪ್ತಿಗೆ ಒಳಪಡಿಸಿ ಅವರಿಗೂ ಕಾರ್ಡ್‌ಗಳನ್ನು ಕೊಡಬೇಕೆನ್ನುವಂತಹ ನಿರ್ದೇಶನವನ್ನು ಜಿಲ್ಲಾಧಿಕಾರಿಗಳಿಗೆ ಈ ಸಮೀಕ್ಷೆ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕೆಂದು ಹೇಳಿದ್ದೇವೆ. ಇದರ ಜೊತೆಗೆ ಕೊನೆಗೆ ಒಂದನ್ನು ಹೇಳಿದ್ದೇವೆ. ಒಟ್ಟಾರೆ ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಕುಟುಂಬದ ಜೀವನ ಮಟ್ಟವನ್ನೂ ಕೂಡ ಸಮೀಕ್ಷೆ ಮಾಡಿ ನಿರ್ಣಯಿಸಬೇಕೆಂದು ಕೊನೆಗೊಂದು clause ಹಾಕಿದ್ದೇವೆ. ಇದ್ಯಾವದರಲ್ಲೂ ಸ್ವಲ್ಪ ಮಟ್ಟಿನ ವ್ಯತ್ಯಾಸ ಇದ್ದರೂ ಕೂಡ ಅವರ ಜೀವನ ಮಟ್ಟ, ಬಹಳ ಬಡತನದಲ್ಲಿದೆ ಎನ್ನುವುದು ಸಮೀಕ್ಷಾ ತಂಡಕ್ಕೆ ಮನವರಿಕೆಯಾದರೆ, ಅವರನ್ನೂ ಕೂಡ ಇದರ ವ್ಯಾಪ್ತಿಗೆ ತರಬೇಕು ಅನ್ನತಕ್ಕಂಥ . . . . . .

**ಶ್ರೀ ಬಿ.ಎಸ್.ಯಡಿಯೂರಪ್ಪ:**– 224 ವಿಧಾನ ಸಭಾ ಕ್ಷೇತ್ರಗಳ ಯಾವುದೋ ಒಂದು ತಾಲ್ಲೂಕಿನ ಒಂದು ಕ್ಷೇತ್ರದಲ್ಲಿ . . . . . ಮಾನ್ಯ ಮುಖ್ಯಮಂತ್ರಿಗಳೂ ಸಹ ಇಲ್ಲೇ ಇದ್ದಾರೆ. ಉದಾಹರಣೆಗೆ ಹೇಳುವುದಾದರೆ ನನ್ನ ಕ್ಷೇತ್ರದ ಯಾವುದೋ ಒಂದು ತಾಲ್ಲೂಕಿನಲ್ಲಿ ಐದು ಸಾವಿರ ಕಾರ್ಡ್‌ಗಳನ್ನು ನೀವು ರದ್ದು ಮಾಡಿದ್ದೀರಿ. ಆ ಐದು ಸಾವಿರ ಕಾರ್ಡ್‌ಗಳಲ್ಲಿ, ಈಗೇನು ಕೆಲವೊಂದು ಮಾನದಂಡಗಳನ್ನು ನೀವು relax ಮಾಡಿದ್ದೀರಲ್ಲಾ, ಅದರನ್ವಯ ಒಬ್ಬನನ್ನು ಇದಕ್ಕೆ eligible ಅಲ್ಲ ಅಂತ ನೀವು ನನಗೆ ತೋರಿಸಿದರೆ, ನಾನು ನೀವು ಹೇಳಿದಂತೆ ಕೇಳುತ್ತೇನೆ. ನಾನೇನು ಹೇಳಲಿಕ್ಕೆ ಹೊರಟಿದ್ದೇನೆ ಎಂದರೆ, ಮಾನ್ಯ ಮುಖ್ಯಮಂತ್ರಿಗಳೂ ಇದ್ದಾರೆ, ದಯಮಾಡಿ ನಾನು ವಿನಂತಿ ಮಾಡುತ್ತೇನೆ. ಬೇಕಾದರೆ ನಾವು ಬಜೆಟ್ ಸೆಷನ್ ಹೇಗೂ ಸೇರುತ್ತಿದೇವೆ, ಯಾರಿಗೆ ನೀವು ಕಾರ್ಡ್ ಕೊಟ್ಟು, ಅಲ್ಲಿ ಮುಖ್ಯಮಂತ್ರಿಗಳು ಒತ್ತಾಯ ಮಾಡಿ, 17–18 ಲಕ್ಷ ಜನರನ್ನು ಸೇರಿಸಿದ್ದರೋ, slip ಕೊಟ್ಟವರಿಗೆ, ಅವರು ಇದರಿಂದ ವಂಚಿತರಾಗಿದ್ದಾರೆ. ನೀವು ಎಲ್ಲವನ್ನೂ ಕೂಡ ಸರ್ವೆ ಮಾಡಿ ಮುಗಿಸಿ ನೀವು ಕಾರ್ಡ್ ಕೊಡುವುದಕ್ಕೆ ಶುರುವಾಗುವುದು ಯಾವಾಗ? ನಾನು ಈಗಲೇ ನಿಮಗೆ ಆ ಬಗ್ಗೆ ಹೇಳುತ್ತೇನೆ. ಅದು ಏಪ್ರಿಲ್‌ಗೆ ಮುಂಚೆ ಆಗುವುದಿಲ್ಲ. ಈ 2–3 ತಿಂಗಳು ಅವನು suffer ಆಗುತ್ತಾನೆ. ನಾನೇನು requet ಮಾಡಿಕೊಳ್ಳುತ್ತೇನೆ ಎಂದರೆ, ಇಷ್ಟು ದೊಡ್ಡ ಪ್ರಮಾಣದಲ್ಲಿ ಸಬ್ಸಿಡಿ ಕೊಡುತ್ತೀರಿ, ಮುಖ್ಯಮಂತ್ರಿಗಳೂ ಇದ್ದಾರೆ, ಗ್ರಾಮ ಪಂಚಾಯಿತಿ ಚುನಾವಣೆ ಸಂದರ್ಭದ ಈ ಸಮಯದಲ್ಲಿ ನೀವು ಯಾರ್ಯಾರಿಗೋ ಕಟ್ ಮಾಡಿದ್ದೀರೋ, ಅವರಿಗೆ ಅಕ್ಕಿ ಕೊಡಿ. ನೀವು ಸರ್ವೆ ಮಾಡಿದ ಮೇಲೆ, ಯಾರು ನಿಮ್ಮ ಒಂದು ಚೌಕಟ್ಟಿಗೆ ಬರುವುದಿಲ್ಲವೋ, ನಾನು ಈ ಸದನದಲ್ಲಿ ನಿಂತು, ರದ್ದು ಮಾಡಿದ್ದಕ್ಕಾಗಿ ಅವರ ಪರವಾಗಿ ಕೇಳುವುದೇ ಇಲ್ಲ. ಆದರೆ ಇವತ್ತು ನೀವು ಯಾವುದೇ ಶಾಸಕರನ್ನು ಕೇಳಿ ನೋಡಿ, ಎಲ್ಲಾ ಕಡು ಬಡವರದ್ದೇ ಈಗ ಕಟ್ ಆಗಿದೆ. ದಯಮಾಡಿ ಇದನ್ನು ಪರಿಶೀಲನೆ ಮಾಡಿ.

**ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್:**– ಮಾನ್ಯ ಅಧ್ಯಕ್ಷರೆ, ಇದು ಏನಾಗಿದೆ ಎಂದರೆ, ಹಿಂದೆ ಈ ಪ್ರಶ್ನೆ ಬಂದಾಗ ಮಾನ್ಯ ಅಧ್ಯಕ್ಷರು ಅರ್ಧ ಗಂಟೆ ಅವಧಿಗೆ ಇದಕ್ಕೆ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದರು. ಅದು ಯಾವ ಸಂದರ್ಭಕ್ಕಾಗಿ ಎಂದರೆ ಕೆಲವು ಕಾರ್ಡ್‌ದಾರರಿಗೆ, ಯಾರು ಹಿಂದೆ ಹಸಿರು ಕಾರ್ಡ್ ಅನ್ನು ಹೊಂದಿದ್ದರೋ ಅವರು ಹಳದಿ ಕಾರ್ಡ್‌ಗೆ ಪರಿವರ್ತನೆ ಹೊಂದಿದಂತಹ ಸಂದರ್ಭದಲ್ಲಿ, ಹಳದಿ ಕಾರ್ಡ್ ಅವರಿಗೆ ಸಿಕ್ಕಿಲ್ಲ ಎನ್ನುವ ಕಾರಣಕ್ಕೆ ಅವರಿಗೆ temporary ID cards ಎಂದು ಕೊಡಲಾಗಿತ್ತು. ಆ ರೀತಿ ಕೊಟ್ಟಿದ್ದಂತಹವರಿಗೆ ಮೂರು ತಿಂಗಳ ಅವಧಿಯೊಳಗಡೆ, ಅವರಿಗೆ ಪುನರ್ ಪರಿಶೀಲನೆ ಮಾಡಿ, ಅವರಲ್ಲಿ ಅರ್ಹತೆ ಇರುವವರಿಗೆಲ್ಲಾ ಹಳದಿ ಕಾರ್ಡ್ ಅನ್ನು ವಿತರಣೆ ಮಾಡಬೇಕೆನ್ನುವ ಉದ್ದೇಶದಿಂದ ಮೂರು ತಿಂಗಳ ಅವಧಿಗೆ ಈ temporary ID card ಎಂದು ಕೊಟ್ಟಿದ್ದರು. ಆ ರೀತಿ ಮೂರು ತಿಂಗಳೊಳಗಡೆ ಸಮೀಕ್ಷೆ ಮಾಡಿ ಕೊಡಬೇಕಾದಂತಹ ಸಂದರ್ಭದಲ್ಲಿ ಚುನಾವಣೆ ಘೋಷಣೆ ಆಗಿದ್ದರಿಂದ, ಚುನಾವಣಾ ಆಯೋಗದ ಅನುಮತಿಯನ್ನು ಪಡೆದುಕೊಂಡು, ಅವರಿಗೂ ಕೂಡ ಆ ಕಾರ್ಡ್‌ನ ಅವಧಿಯಲ್ಲೂ ಪಡಿತರ ವಿತರಣೆ ಮಾಡುವಂತಹ ವ್ಯವಸ್ಥೆಯನ್ನು ಮಾಡಲಾಗಿತ್ತು. ಚುನಾವಣೆಯಾಗಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ, ತಾವು ಆ ಕಾರ್ಡ್‌ಗಳನ್ನು ರದ್ದು ಪಡಿಸುತ್ತಿದ್ದೀರಿ ಎನ್ನುವಂತಹ ಅಭಿಪ್ರಾಯವನ್ನು ಸದನದಲ್ಲಿ ವ್ಯಕ್ತಪಡಿಸಿದಾಗ, ಮಾನ್ಯ ಮುಖ್ಯಮಂತ್ರಿಗಳು, ಆ ರೀತಿ ನಾವು

ಮಾಡುವುದಿಲ್ಲ, ಅವರಿಗೂ ನಾವು ಮುಂದುವರೆಸುತ್ತೇವೆ ಎನ್ನುವಂತಹ ಒಂದು ಆಶ್ವಾಸನೆಯನು ಕೊಟ್ಟಿದ್ದರು. ಆ ಆಶ್ವಾಸನೆಯಂತೆ ಇವತ್ತೂ ಕೂಡ ID card ನವರಿಗೆ ಪಡಿತರ ವಿತರಣೆಯನ್ನು ಮಾಡುತ್ತಿದ್ದೇವೆ. ಅದು ಕೆಲವು ತಪ್ಪು ಅಭಿಪ್ರಾಯದಿಂದಾಗಿ ಆ ಒಂದು ಪ್ರಶ್ನೆ ಸದನದಲ್ಲಿ ಉದ್ಭವವಾಗಿತ್ತು. ಆದರೆ ಆ ID cardsನವರಿಗೆ ಯಾರಿಗೂ ಕೂಡ ಇವತ್ತು ರದ್ದುಪಡಿಸಿಲ್ಲ. ಆ ID cards ಕೊಟ್ಟಿರುವವರಲ್ಲೂ ಯಾರಾದರೂ ಅನರ್ಹರು ಸಿಕ್ಕಿದ್ದರೆ, ಅಂತಹವರ ಕಾರ್ಡ್‌ಗಳನ್ನು ರದ್ದು ಪಡಿಸಿದ್ದೇವೆಯೇ ಹೊರತು ID cards ಅನ್ನು ಪೂರ್ಣವಾಗಿ ರದ್ದುಪಡಿಸಿರತಕ್ಕಂಥ ವ್ಯವಸ್ಥೆ ಆಗಿಲ್ಲ. ಆದರೆ, ಇನ್ನೊಂದು ತಿಂಗಳಿನಲ್ಲಿ ಈ ಸಮೀಕ್ಷೆ ಕಾರ್ಯ ಪೂರ್ಣಗೊಳ್ಳುವುದರಿಂದ, ಈಗೇನು ರದ್ದುಪಡಿಸಿದೆಯೋ, ಅವರನ್ನು ಹೊರತುಪಡಿಸಿ ಉಳಿದವರಿಗೆಲ್ಲಾ ಕೊಡುತ್ತಿದ್ದೇವೆ. ಕಾರ್ಡೇ ಸಿಕ್ಕದಿರುವಂತಹ ಎಷ್ಟೋ ಜನ ಬಡ ಕುಟುಂಬಗಳು ಇವತ್ತು ನಮ್ಮ ರಾಜ್ಯದಲ್ಲಿವೆ. ಅವರ ಬಗ್ಗೆಯೂ ಸಹ ನಾವು ಚಿಂತನೆ ಮಾಡಿ, ಈ ಸಮೀಕ್ಷೆ ವ್ಯಾಪ್ತಿಯಲ್ಲಿ ತಮ್ಮೆಲ್ಲರ ಸಹಕಾರದಿಂದ ಅವರಿಗೆಲ್ಲರಿಗೂ ಕೊಡಿಸುವಂತಹ ವ್ಯವಸ್ಥೆಯನ್ನು ಮಾಡೋಣ. ಒಂದು ತಿಂಗಳ ಅವಧಿಗೋಸಕ್ಕರ ಮತ್ತೆ ಅವರಿಗೆ ಪುನರ್ ಪರಿಶೀಲನೆ ಮಾಡುವಂತಹ ಅವಶ್ಯಕತೆ ಬೀಳುವುದಿಲ್ಲ ಎನ್ನುವಂತಹ ಮಾತನ್ನು ನಾನು ಹೇಳಬಯಸುತ್ತೇನೆ.

**ಶ್ರೀ ಬಿ.ಎಸ್.ಯಡಿಯೂರಪ್ಪ:**– ತಾವು ಪ್ರಾಕ್ಟಿಕಲ್ಲಾಗಿ ಯೋಚನೆ ಮಾಡಿ. ಈಗ ಗ್ರಾಮ ಪಂಚಾಯತ್ ಚುನಾವಣೆ ಬರುತ್ತಿದೆ, ಅದು ಫೆಬ್ರವರಿಗೆ ಮುಗಿಯುತ್ತದೆ. ಮಾರ್ಚ್‌ನಲ್ಲಿ ಅಧ್ಯಕ್ಷರ ಚುನಾವಣೆಯ ಗೊಂದಲಗಳು ಆಗುತ್ತವೆ. ಬಜೆಟ್‌ಗಾಗಿ ನಾವಿಲ್ಲಿಗೆ ಬರುತ್ತೇವೆ. ನಾನು ಇಷ್ಟೇ ಹೇಳುತ್ತೇನೆ, ಮಾರ್ಚ್‌ನಲ್ಲಿ ಬಜೆಟ್‌ಗಾಗಿ ನಾವು ಇಲ್ಲಿಗೆ ಬಂದಾಗ, ನಾವು ಸರ್ವೆ ಕಾರ್ಯ ಮುಗಿಸಿ ಬಂದಿದ್ದೇವೆ ಎಂದು ನೀವು ಹೇಳಿದರೆ, ನಾನು ನೀವು ಹೇಳಿದಂತೆ ಕೇಳುತ್ತೇನೆ. ಅದು ಅಸಾಧ್ಯವಾದ ಮಾತು. . .

**ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್:**– ಏಪ್ರಿಲ್‌ಗೆ ಮುಗಿಸುತ್ತೇವೆ.

**ಶ್ರೀ ಬಿ.ಎಸ್.ಯಡಿಯೂರಪ್ಪ:**– ಈಗ ನಿಮ್ಮ ಯಾವ ಅಧಿಕಾರಿಗಳು ಕೆಲಸ ಮಾಡಲಿಕ್ಕೆ ಹೋಗುತ್ತಾರೆ? ಕಳೆದ ಎರಡು ವರ್ಷಗಳಿಂದ ಸರ್ವೆ ಮಾಡುತ್ತಲೇ ಇದ್ದಾರೆ. ಆದರೂ ಅದನ್ನು ಪೂರ್ಣ ಮಾಡಲಿಕ್ಕಾಗಲಿಲ್ಲ. Poor people suffer ಆಗುತ್ತಾರೆಂದು ನಾನು ಹೇಳುತ್ತಿದ್ದೇನೆ. ನೀವು ಏನಾದರೂ ಮಾಡಿಕೊಳ್ಳಿ.

**ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್:**– ಈಗ ನಾವು ಜಿಲ್ಲಾಧಿಕಾರಿಗಳನ್ನು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು involve ಮಾಡಿದ್ದು ನಾಲ್ಕು ವಿಭಾಗದ ಮಟ್ಟದಲ್ಲಿ ನಾನು ಸಭೆಗಳನ್ನು ಮಾಡಿದ್ದೇನೆ. ಎಲ್ಲಾ ಜಿಲ್ಲಾಧಿಕಾರಿಗಳಿಗೆ ಬಹಳ ಕಟ್ಟುನಿಟ್ಟಿನ ಸೂಚನೆಗಳನ್ನು ಕೊಟ್ಟಿದ್ದೇವೆ. ಚುನಾವಣೆ ಇರುವುದರಿಂದ ಒಂದು ತಿಂಗಳ ಕಾರ್ಯ ನಮ್ಮ ಸರ್ವೆ ಕಾರ್ಯ ಮುಂದಕ್ಕೆ ಹೋಗುತ್ತದೆ. ಏಪ್ರಿಲ್ ತಿಂಗಳ ಅಂತ್ಯದೊಳಗೆ ನಾವು ಇದನ್ನು ಪೂರ್ಣಗೊಳಿಸಿ, ಎಲ್ಲಾ ಅರ್ಹರಿಗೂ ದೊರಕುವಂತಹ ಒಂದು ವ್ಯವಸ್ಥೆ ಮಾಡುತ್ತೇವೆ. ದಯಮಾಡಿ ಸಹಕರಿಸಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:**– ಮೂರು ರೂಪಾಯಿಗಳಿಗೆ ಒಂದು ಕೆ.ಜಿ. ಅಕ್ಕಿಯನ್ನು ಕೊಡಬೇಕೆಂದು ಇದೆ. ಆದರೆ ಮೂರೂವರೆ ರೂಪಾಯಿಗಳಂತೆ ಬಹಳ ಕಡೆ ಮಾರುತ್ತಿದ್ದಾರೆ. ನಿಮ್ಮ ಗಮನಕ್ಕೆ ಅದು ಬಂದಿದೆಯೇ? ಅಂತಹವರ ಬಗ್ಗೆ ಇವತ್ತಿನವರೆಗಾದರೂ ಕ್ರಮ ತೆಗೆದುಕೊಳ್ಳುವಂತಹ ಕೆಲಸ ಮಾಡಿದ್ದೀರಾ? ಎಂಬ ಪ್ರಶ್ನೆಯನ್ನು ನಾನು ನಿಮಗೆ ಕೇಳಬಯಸುತ್ತೇನೆ.

**ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್**:– ಮಾನ್ಯ ಅಧ್ಯಕ್ಷರೆ, ಈ ತರಹ ಎಲ್ಲೆಲ್ಲಿ ಹೆಚ್ಚಿನ ಹಣ ಪಡೆದು ಅಕ್ಕಿಯನ್ನು ಮಾರಟ ಮಾಡುತ್ತಿದ್ದಾರೆ ಎನ್ನುವಂತಹ ದೂರುಗಳು ಬಂದಿವೆಯೋ, ಅಂತಹ ಕಡೆಗಳಲ್ಲೆಲ್ಲಾ ಕೆಲವು ಲೈಸೆನ್ಸ್‌ಗಳನ್ನು ರದ್ದು ಪಡಿಸತಕ್ಕಂಥ ಕೆಲಸವನ್ನೂ ಕೂಡ ಮಾಡಿದ್ದೇವೆ. ರಾಜ್ಯದಲ್ಲಿ ಸುಮಾರು 88 ನ್ಯಾಯ ಬೆಲೆ ಅಂಗಡಿಗಳಿಗೆ ನೋಟೀಸ್‌ಗಳನ್ನು ನೀಡಲಾಗಿದೆ. ಸುಮಾರು 67 ನ್ಯಾಯ ಬೆಲೆ ಅಂಗಡಿಗಳ ಮೇಲೆ ದಂಡ ವಿಧಿಸಲಾಗಿದೆ. 8 ನ್ಯಾಯ ಬೆಲೆ ಅಂಗಡಿಗಳ ಲೈಸೆನ್ಸ್‌ಗಳನ್ನು ರಾಜ್ಯಾದ್ಯಂತ ರದ್ದುಪಡಿಸಿದ್ದೇವೆ. ಎಲ್ಲೆಲ್ಲಿ ಆ ತರಹದ ದೂರುಗಳು ಬಂದಿವೆಯೋ, ಅಂತಹ ಕಡೆಗಳಲ್ಲಿ ತುರ್ತಾಗಿ ಆಯಾ ಜಿಲ್ಲಾಧಿಕಾರಿಗಳೇ ಕ್ರಮ ಕೈಗೊಂಡು, alternative arrangements ಮಾಡಿ ವ್ಯವಸ್ಥೆ ಮಾಡುತ್ತಿದ್ದಾರೆ. ನಿರ್ದಿಷ್ಟವಾಗಿ ದೂರು ಬಂದಿರುವಂತಹ ಕಡೆಗಳಲ್ಲೆಲ್ಲಾ ಕ್ರಮ ಕೈಗೊಂಡು ಅವನ್ನು ರದ್ದುಪಡಿಸುವಂತಹ ವ್ಯವಸ್ಥೆ ಮಾಡಿದ್ದೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ**:– ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಟ್ಟಿದ್ದೇನೆ. ಏಡ್ಸ್ ಜಾಗೃತಿ ಮಾಡಬೇಕೆನ್ನುವಂತಹ ಉದ್ದೇಶದಿಂದ ಅಕ್ಕಿಯನ್ನು ತರಲು ಮಕ್ಕಳು ಹೋದಾಗ ಅವರಿಗೆ ಕಾಂಡೋಮ್ಸ್ ಅನ್ನು ಕೊಟ್ಟು ಕಳುಹಿಸಿದ್ದಾರೆ. ಉದ್ರೇಕಕಾರಿಯಾದ ಆ ತರಹದ್ದನ್ನೆಲ್ಲಾ ಅವರು ಮಕ್ಕಳ ಕೈಗೆ ಕಳುಹಿಸಿಕೊಡುತ್ತಿದ್ದಾರೆ. ತಹಸೀಲ್ದಾರ್‌ಗಳೇ ಇದನ್ನು ತೆಗೆದುಕೊಳ್ಳಬೇಕೆಂದು ಸೂಚನೆಗಳನ್ನು ಕೊಟ್ಟಿದ್ದಾರಂತೆ.

**ಶ್ರೀ ವಾಟಾಳ್ ನಾಗರಾಜ್**:– ಇಷ್ಟು ಹೊತ್ತಿನಲ್ಲಿ ಏಕೆ ಆ ವಿಚಾರ?

**ಶ್ರೀ ಕೆ.ಎಸ್.ಈಶ್ವರಪ್ಪ**:– ಇಷ್ಟು ಹೊತ್ತಿನಲ್ಲಿ ಈ ವಿಚಾರವನ್ನು ವಿಧಾನ ಸಭೆಯಲ್ಲಿ ಪ್ರಸ್ತಾಪ ಮಾಡದೆ ಇನ್ನೆಲ್ಲಿ ಪ್ರಸ್ತಾಪಿಸಬೇಕು?

**ಶ್ರೀ ವಾಟಾಳ್ ನಾಗರಾಜ್**:– ನಿರೋಧ್ ವಿಚಾರವೆಲ್ಲಾ ಇಷ್ಟು ಹೊತ್ತಿನಲ್ಲಿ ಮಾತನಾಡಬಾರದು. ಅದು ಒಳ್ಳೆಯದಲ್ಲ. ಬೇರೆ ಸಂದರ್ಭದಲ್ಲಿ ಆ ಬಗ್ಗೆ ಮಾತನಾಡಿ.

**ಶ್ರೀ ಕೆ.ಎಸ್.ಈಶ್ವರಪ್ಪ**:– ಮಾನ್ಯ ಮುಖ್ಯಮಂತ್ರಿಗಳಿಗೆ ಆ ಬಗ್ಗೆ ಪೇಪರ್‌ನಲ್ಲಿ ಬಂದಿರುವಂತಹ ಆರ್ಟಿಕಲ್ ಅನ್ನೇ ಕಳುಹಿಸಿಕೊಡುತ್ತಿದ್ದೇನೆ. ಈ ರೀತಿ ತಹಸೀಲ್ದಾರ್‌ರವರೆ ಸೂಚನೆ ಕೊಟ್ಟು . . . . .

**ಶ್ರೀ ವಾಟಾಳ್ ನಾಗರಾಜ್**:– ಅವರಿಗ್ಯಾಕೆ ಇದನ್ನು ಕಳುಹಿಸುತ್ತೀರಿ?

**ಶ್ರೀ ಕೆ.ಎಸ್.ಈಶ್ವರಪ್ಪ**:– ನಾನು ಇದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಾರದೆ, ಇನ್ಯಾರ ಗಮನಕ್ಕೆ ತರಲಿ?

**ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್**:– ಮಾನ್ಯ ಅಧ್ಯಕ್ಷರೆ, ಎಲ್ಲೂ ಅದನ್ನು insist ಮಾಡುತ್ತಿಲ್ಲ. Family planning ದೃಷ್ಟಿಯಿಂದ ಮತ್ತು AIDS ನಿಯಂತ್ರಣ ಮಾಡುವಂತಹ ದೃಷ್ಟಿಯಿಂದ, ನ್ಯಾಯ ಬೆಲೆ ಅಂಗಡಿಗಳ ಮುಖಾಂತರ ನಿರೋಧ್ ಅನ್ನು ವಿತರಣೆ ಮಾಡುವಂತಹ ಸೂಚನೆ ಇದೆ. ಆದರೆ ನ್ಯಾಯ ಬೆಲೆ ಅಂಗಡಿಗಳವರು ಯಾರ್ಯಾರು ಬರುತ್ತಾರೋ, ಅವರಿಗೆಲ್ಲಾ ಕಡ್ಡಾಯವಾಗಿ ಕೊಡಲೇ ಬೇಕು ಎಂಬ ಸೂಚನೆಯಿಲ್ಲ. ಯಾರಾದರೂ . . . . . .

**ಶ್ರೀ ಕೆ.ಎಸ್.ಈಶ್ವರಪ್ಪ**:– ಮುಖ್ಯಮಂತ್ರಿಗಳ ಬಳಿಗೆ ಆರ್ಟಿಕಲ್ ಅನ್ನೇ ಕಳುಹಿಸಿ ಕೊಟ್ಟಿದ್ದೇನೆ. ಇದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ?

**ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು):**– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕಳುಹಿಸಿಕೊಟ್ಟ ಪತ್ರಿಕೆಯಲ್ಲಿ ಬಂದಿರುವಂತಹ ಚಿತ್ರವನ್ನು ನೋಡಿದ್ದೇನೆ. ನಿಜವಾಗಿಯೂ ಈ ರೀತಿ ಯಾರಿಗೂ ಕೂಡ ಒತ್ತಾಯ ಮಾಡಬಾರದು. ಈ ತರಹ ಚಿತ್ರದೊಂದಿಗೆ ಪ್ರಚಾರ ಮಾಡತಕ್ಕ ಕೆಲಸ ಮಾಡುವುದು ಸರಿಯಾದ ಕೆಲಸವಲ್ಲ. ತಾವು ಕಳುಹಿಸಿದ್ದನ್ನು ನಾನು ನೋಡಿದ್ದೇನೆ. ಇದರ ಬಗ್ಗೆ ಮಾಹಿತಿ ತರಿಸಿ, ಇದರ ಬಗ್ಗೆ ಕ್ರಮ ತೆಗೆದುಕೊಂಡು, ಯಾರ್ಯಾರು ಇದಕ್ಕೆ ಕಾರಣಕರ್ತರಾಗಿದ್ದಾರೋ, ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಇದು ಸರಿಯಲ್ಲ. It is very bad.

**ಶ್ರೀ ಕೆ.ಎಸ್.ಈಶ್ವರಪ್ಪ:**– ಸಂಬಂಧಪಟ್ಟ ತಹಸೀಲ್ದಾರ್‌ರವರಿಗೆ ಈ ಬಗ್ಗೆ ಸೂಚನೆ ಕೊಡಿ.

**ಶ್ರೀ ಧರ್ಮಸಿಂಗ್:**– ನೀವು ಹೇಳಿದ್ದನ್ನು ನಾನು ಒಪ್ಪುತ್ತೇನೆ, ನಾನು ಅದನ್ನು ಅಲ್ಲಗಳೆಯುತ್ತಿಲ್ಲ. I will take action against the concerned.

**ಛೇರ್ಮನ್:**– ಈಗ ಮುಂದಿನ ಪ್ರಶ್ನೆ ರಾಜೇಂದ್ರ ವರ್ಮ ಅವರದು.

**ಶ್ರೀ ಸಿದ್ದು ಸವದಿ:**– ನನ್ನ ಕ್ಷೇತ್ರದಲ್ಲಿ 22 ಸಾವಿರ ಕಾರ್ಡ್‌ಗಳನ್ನು ರದ್ದು ಮಾಡಿದ್ದಾರೆ. ಇದಕ್ಕೆ ಕಾರಣ ಬೇಕು. ನನ್ನ ಕ್ಷೇತ್ರವೊಂದರಲ್ಲೇ 22 ಸಾವಿರ ಕಾರ್ಡ್‌ಗಳನ್ನು ರದ್ದು ಮಾಡಿದ್ದರೆ, 176 ತಾಲ್ಲೂಕುಗಳಲ್ಲಿ 20 ಲಕ್ಷ ಕಾರ್ಡ್‌ಗಳನ್ನು ರದ್ದು ಮಾಡಬೇಕಾಗುತ್ತದೆ. ನಮ್ಮಲ್ಲಿ ಏಕೆ ತಾರತಮ್ಯ ಮಾಡಿದ್ದಾರೆ ಎಂಬುದಕ್ಕೆ ಮಾನ್ಯ ಸಚಿವರು ಉತ್ತರ ಹೇಳಬೇಕು . . . . . .

**ಛೇರ್ಮನ್:**– ಮಾನ್ಯ ಸಚಿವರು ಆಗಲೇ ವಿವರಣೆ ಕೊಟ್ಟಿದ್ದಾರೆ. ಇನ್ನು ಒಂದು ತಿಂಗಳೊಳಗಾಗಿ ಸರ್ವೆ ಮಾಡಿ ಅರ್ಹರೆಲ್ಲರಿಗೂ ಕೊಡುತ್ತೇವೆ ಎಂದು ಹೇಳಿದ್ದಾರೆ.

**ಶ್ರೀ ಸಿದ್ದು ಸವದಿ:**– 22 ಸಾವಿರ ಕಾರ್ಡ್‌ಗಳನ್ನು ರದ್ದು ಮಾಡಿರುವುದಕ್ಕೆ ಕಾರಣವೇನು? ಇದರ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

**ಛೇರ್ಮನ್:**– ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಸಿದ್ದು ಸವದಿ:**– ಜನ ನಮಗೆ ಬಿಡುವುದಿಲ್ಲ. ನನಗೆ ಉತ್ತರ ಕೊಡದಿದ್ದಾರೆ ನಾನು ಧರಣಿ ಕುಳಿತು ಕೊಳ್ಳುತ್ತೇನೆ.

**ಮಾನ್ಯ ಸದಸ್ಯರು:**– ಧರಣಿ ನಡೆಸಲು ಮುಂದಾದರು

**ಶ್ರೀ ಹೆಚ್.ಎಸ್.ಮಹಾದೇವಪ್ರಸಾದ್:**– ಸಂಬಂಧಪಟ್ಟ ವಿಷಯದ ಬಗ್ಗೆ ನಾನು ಮಾನ್ಯ ಸದಸ್ಯರಿಗೆ ಮನವರಿಕೆ ಮಾಡಿಕೊಟ್ಟಿದ್ದೇನೆ.

**ಛೇರ್ಮನ್:**– ವಿವರಣೆ ಕೊಟ್ಟಿದ್ದಾರೆ. ಮೂರು ನಾಲ್ಕು ಕ್ಲಾರಿಫಿಕೇಷನ್‌ಗೆ ಅವಕಾಶ ಕೊಟ್ಟಿದ್ದೇನೆ. ಸಮಯ ಆಗಿದೆ. ದಯವಿಟ್ಟು ನೀವು ಸ್ಥಳಕ್ಕೆ ಹೋಗಿ.

**ಶ್ರೀ ಹೆಚ್.ಎಸ್.ಮಹಾದೇವಪ್ರಸಾದ್:**– ಸರಿಪಡಿಸಿಕೊಡುತ್ತೇನೆಂದು ಮನವರಿಕೆ ಮಾಡಿ ಕೊಟ್ಟಿದ್ದೇನೆ.

**ಛೇರ್ಮನ್:**– ಮಂತ್ರಿಗಳು ಸರಿಪಡಿಸುತ್ತೇನೆಂದು ಹೇಳಿದ್ದಾರೆ. ದಯವಿಟ್ಟು ಹೋಗಿ ಕುಳಿತುಕೊಳ್ಳಿ.

**ಶ್ರೀ ಕೆ.ತ್ರೀನಿವಾಸಗೌಡ(ಕೃಷಿ ಸಚಿವರು):**– ಪ್ರಶ್ನೋತ್ತರ ವೇಳೆಯಲ್ಲಿ ಬಾವಿಗೆ ಇಳಿಯುತ್ತೇನೆಂದರೆ ಇದು ಯಾವ ನ್ಯಾಯ? ಪ್ರಶ್ನೋತ್ತರ ವೇಳೆಯಲ್ಲಿ ಈ ತರಹ ನಿಯಮಪಾಲನೆ ಮಾಡದೆ ಪ್ರತಿಭಟನೆ ಮಾಡಿದರೆ ಹೇಗೆ?

**ಛೇರ್‌ಮನ್:**– ಸಿದ್ದುಸವದಿಯವರೆ, ದಯವಿಟ್ಟು ಹೋಗಿ ಕುಳಿತುಕೊಳ್ಳಿ.

(ಮಾನ್ಯ ಸದಸ್ಯರಾಧ ಶ್ರೀ ಸಿದ್ದುಸವದಿಯವರೆ ಅವರು ತಮ್ಮ ಜಾಗಕ್ಕೆ ಮರಳಿದರು)

**ಶ್ರೀ ಸಿದ್ದು ಸವದಿ:**– ಪರಿಸ್ಥಿತಿ ಹಾಗೆ ಇದೆ. 22,000 ಪಡಿತರ ಚೀಟಿಗಳೂ ರದ್ದಾಗಿದೆ ಎಂದು ಈಗಾತಾನೇ ಸಚಿವರು ಹೇಳುತ್ತಿದ್ದಾರೆ. ಅಲ್ಲಿ ನಮಗೆ ಜನಗಳಿಗೆ ನೋಡುವುದಕ್ಕಾಗುತ್ತಿಲ್ಲ.....

**ಅಧ್ಯಕ್ಷರು:**– ಮಂತ್ರಿಗಳು ಸರಿಪಡಿಸುತ್ತೇವೆಂದು ಹೇಳಿದ್ದಾರೆ, ಮುಂದಿನ ಪ್ರಶ್ನೆ, ಕೋಟ್ಟಾರಿಯವರು ಕೇಳಿ.

**ಗ್ರಾಮೀಣ ಪ್ರದೇಶದ ರೈತರ ಪಂಪ್‌ಸೆಟ್‌ಗಳಿಗೆ ಸೀಮೆಎಣ್ಣೆ ಸರಬರಾಜು ಮಾಡುವುದು**

123(1409) ಶ್ರೀ ಪದ್ಮನಾಭ ಕೋಟ್ಟಾರಿ ಕೆ.(ವಿಟ್ಲ): ಮಾನ್ಯ ಆಹಾರ, ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ರೈತರ ಪಂಪ್‌ಸೆಟ್‌ಗಳಿಗೆ ಬಳಸುವ ಸೀಮೆ ಎಣ್ಣೆಯನ್ನು ಸಬ್ಸಿಡಿ ದರದಲ್ಲಿ ಒದಗಿಸಿಕೊಡಲು ಕ್ರಮ ಜರುಗಿಸಲಾಗಿದೆಯೆ?

ಆ) ರೈತರು ಸೀಮೆ ಎಣ್ಣೆಯನ್ನು ತಮ್ಮ ಪಂಪ್‌ಸೆಟ್‌ಗಳಿಗೆ ಉಪಯೋಗಿಸುತ್ತಿರುವುದರಿಂದ ಸೀಮೆ ಎಣ್ಣೆಯ ಸರಬರಾಜು ಇಲ್ಲದಂತೆ ಆಗಿ ತೊಂದರೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಇ) ಬಂದಿದ್ದಲ್ಲಿ ಕೂಡಲೇ ರೈತರಿಗೆ ಸೀಮೆ ಎಣ್ಣೆಯನ್ನು ಸಬ್ಸಿಡಿ ದರದಲಿ ಒದಗಿಸಿಕೊಡಲು ಸರ್ಕಾರ ಕ್ರಮ ಜರುಗಿಸುವುದೇ?

ಈ) ಹೌದಾದಲ್ಲಿ ಕನಿಷ್ಟ ಪ್ರಮಾಣವನ್ನು ಒಂದು ಲೀಟರ್‌ಗೆ ನಿಗದಿಪಡಿಸುವ ಬೆಲೆ ಎಷ್ಟು?

ಉ) ಗ್ರಾಮಾಂತರದಲ್ಲಿ ಗ್ಯಾಸ್ ಹೊಂದಿದವರಿಗೆ ಪಡಿತರ ವ್ಯವಸ್ಥೆಯಲ್ಲಿ ಸೀಮೆ ಎಣ್ಣೆಯನ್ನು ಕೊಡದಿರುವುದು ಸಮಂಜಸವೇ?

ಊ) ಉರುವಲು ಕಟ್ಟಿಗೆಯ ಅಭಾವದ ಈ ದಿನಗಳಲ್ಲಿ ಗ್ಯಾಸ್ ಸಂಪರ್ಕವನ್ನು ಹೊಂದಿದವರಿಗೂ ಸೀಮೆ ಎಣ್ಣೆಯನ್ನು ಒದಗಿಸಿಕೊಡಲು ಸರ್ಕಾರ ಕ್ರಮ ಜರುಗಿಸುವರೇ:

ಶ್ರೀ ಹೆಚ್.ಎಸ್.ಮಹಾದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಇಲ್ಲ. ಕೇಂದ್ರ ಸರ್ಕಾರವು ಪಡಿತರ ವ್ಯವಸ್ಥೆಯಡಿಯಲ್ಲಿ ನೀಡುವ ಸೀಮೆ ಎಣ್ಣೆಯನ್ನು ಅಡುಗೆಗೆ ಹಾಗೂ ಬೆಳಕಿಗೆ ಮಾತ್ರ ಉಪಯೋಗಿಸಲು ನಿರ್ಬಂದವಿರುವುದರಿಂದ ರೈತರ ಪಂಪ್‌ಸೆಟ್‌ಗಳಿಗೆ ನೀಡಲು ಸಾಧ್ಯವಿರುವುದಿಲ್ಲ.

ಆ) ಹೌದು

ಇ) ಕೇಂದ್ರ ಸರ್ಕಾರವು ಪಡಿತರ ವ್ಯವಸ್ಥೆಯಡಿಯಲ್ಲಿ ನೀಡುವ ಸೀಮೆ ಎಣ್ಣೆಯ ಅಡುಗೆಗೆ ಹಾಗೂ ಬೆಳಕಿಗೆ ಮಾತ್ರ ಉಪಯೋಗಿಸಲು ನಿರ್ಬಂದವಿರುವುದರಿಂದ ಪಡಿತರ ಸೀಮೆ ಎಣ್ಣೆಯನ್ನು ರೈತರ ಪಂಪ್‌ಸೆಟ್‌ಗಳಿಗೆ ನೀಡಲು ರಹ ಇರುವುದಿಲ್ಲ. ಆದರೆ ಮುಕ್ತ ಮಾರುಕಟ್ಟೆಯಲ್ಲಿ ಬಿಳಿ ಸೀಮೆ ಎಣ್ಣೆ ಲಭ್ಯವಿರುವುದನ್ನು ರೈತರು ಬಳಸಿಕೊಳ್ಳಬಹುದಾಗಿದೆ.

ಈ) ಉದ್ಭವಿಸುವುದಿಲ್ಲ